File No.DPAR/42/DBM/2021-DPAR_EXE_A-DPAR

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮದ ಕಚೇರಿಗೆ ವಿಶ್ವೇಶ್ವರಯ್ಯ ಗೋಪುರದಲ್ಲಿ ಸ್ಥಳಾವಕಾಶವನ್ನು ಒದಗಿಸುವ ಬಗ್ಗೆ.

ಓದಲಾಗಿದೆ:-

1. ಅಧ್ಯಕ್ಷರು, ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ, ಇವರ ಪತ್ರ ಸಂಖ್ಯೆ: ಕ.ವೀ.ಲಿ.ಅ.ನಿ/ಆ/17/20-21 ದಿನಾಂಕ 23.04.2021
2. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 300 ಡಿಬಿಎಂ 2015 ದಿನಾಂಕ 16.03.2019
3. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 42 ಡಿಬಿಎಂ 2021 ದಿನಾಂಕ 10.02.2021

ಪ್ರಸ್ತಾವನೆ:-

ಅಧ್ಯಕ್ಷರು, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ಇವರು ಮೇಲೆ ಓದಲಾದ (1)ರ ಮನವಿಯಲ್ಲಿ ವಿವಿ ಚಿಕ್ಕಗೋಪುರದ 4ನೇ ಮಹಡಿಯಲ್ಲಿ ಸುಮಾರು 3000 ಚದರಡಿಗಳಷ್ಟು ಸ್ಥಳಾವಕಾಶವನ್ನು ನಿಗಮದ ಕಚೇರಿಗೆ ಹಾಗೂ ಸದರಿ ಕಟ್ಟಡದ 5ನೇ ಮಹಡಿಯ ಸ್ಥಳಾವಕಾಶವನ್ನು ಕರ್ನಾಟಕ ಸರ್ಕಾರದ ಸಚಿವಾಲಯದ ತರಬೇತಿ ಸಂಸ್ಥೆಗೆ ಹಂಚಿಕೆ ಮಾಡಿದ್ದು, ಅಲ್ಲಿ ಇನ್ನು ಸಚಿವಾಲಯ ತರಬೇತಿ ಸಂಸ್ಥೆಯವರು ಕಚೇರಿಯನ್ನು ಪ್ರಾರಂಭಿಸಿರುವುದಿಲ್ಲ. ಆದ್ದರಿಂದ 4ನೇ ಮಹಡಿಯಲ್ಲಿ ಹಂಚಿಕೆ ಮಾಡಿರುವ ಸುಮಾರು 3000 ಚದರಡಿ ಸ್ಥಳಾವಕಾಶವನ್ನು ತರಬೇತಿ ಸಂಸ್ಥೆಗೆ ಮರು ಹಂಚಿಕೆ ಮಾಡಿದರೆ, ಇದಕ್ಕೆ ಹೊಂದಿಕೊಂಡಂತೆ ಒಂದು ಆಡಿಟೋರಿಯಂ ಇದ್ದು ತರಬೇತಿ ಸಂಸ್ಥೆಗೆ ಬಳಸಿಕೊಳ್ಳಲು ಅನುಕೂಲ ವಾಗುತ್ತದೆ. ಆದ್ದರಿಂದ ಸಚಿವಾಲಯದ ತರಬೇತಿ ಸಂಸ್ಥೆಗೆ ನೀಡಲಾಗಿರುವ 5ನೇ ಮಹಡಿಯ ಪೂರ್ಣ ಸ್ಥಳಾವಕಾಶವನ್ನು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ ಮರುಹಂಚಿಕೆ ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (2)ರ ಆದೇಶ ದಿನಾಂಕ 16.03.2019 ರಲ್ಲಿ ವಿ.ವಿ. ಚಿಕ್ಕಗೋಪುರದ 5ನೇ ಮಹಡಿಯ ಪೂರ್ಣ ಸ್ಥಳಾವಕಾಶವನ್ನು ಕರ್ನಾಟಕ ಸರ್ಕಾರದ ಸಚಿವಾಲಯದ ತರಬೇತಿ ಸಂಸ್ಥೆಗೆ ಹಂಚಿಕೆ ಮಾಡಿದ್ದು, ಇನ್ನು ಕಚೇರಿಯನ್ನು ಪ್ರಾರಂಭಿಸಿರುವುದಿಲ್ಲ. ಅಂತೆಯೇ ಮೇಲೆ ಓದಲಾದ (3)ರ ಸರ್ಕಾರದ ಆದೇಶ ದಿನಾಂಕ 10.02.2021ರಲ್ಲಿ ವಿ.ವಿ. ಚಿಕ್ಕಗೋಪುರದ 4ನೇ ಮಹಡಿಯಲ್ಲಿ ಸುಮಾರು 3000 ಚದರಡಿಗಳಷ್ಟು ಸ್ಥಳಾವಕಾಶವನ್ನು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಕಚೇರಿಗೆ ಹಂಚಿಕೆ ಮಾಡಲಾಗಿದ್ದು, ಸದರಿ ನಿಗಮದಿಂದ ಯಾವುದೇ ಕಾಮಗಾರಿಯನ್ನು ಈವರೆವಿಗೂ ಕೈಗೆತ್ತಿಕೊಂಡಿರುವುದಿಲ್ಲ.

ಆದ್ದರಿಂದ ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಕಚೇರಿಗೆ ವಿ.ವಿ. ಗೋಪುರದಲ್ಲಿನ 5ನೇ ಮಹಡಿಯ ಸ್ಥಳಾವಕಾಶವನ್ನು ಹಾಗೂ 4ನೇ ಮಹಡಿಯ ಸ್ಥಳಾವಕಾಶವನ್ನು ತರಬೇತಿ ಸಂಸ್ಥೆಗೆ ಪರಸ್ಪರ ಮರು ಹಂಚಿಕೆ ಮಾಡುವ ಕುರಿತು ಪ್ರಸ್ತಾವನೆಯನ್ನು ಮರು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 42 ಡಿಬಿಎಂ 2021**
**ಬೆಂಗಳೂರು, ದಿನಾಂಕ 20.05.2021.**

ಪ್ರಸ್ತಾವನೆಯನ್ನು ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 300 ಡಿಬಿಎಂ 2015 ದಿನಾಂಕ 16.03.2019ರಲ್ಲಿ ವಿ.ವಿ. ಚಿಕ್ಕಗೋಪುರದ 5ನೇ

ಮಹಡಿಯಲ್ಲಿನ ಪೂರ್ಣ ಸ್ಥಳಾವಕಾಶವನ್ನು ಕರ್ನಾಟಕ ಸರ್ಕಾರದ ಸಚಿವಾಲಯದ ತರಬೇತಿ ಸಂಸ್ಥೆಗೆ ಹಂಚಿಕೆ ಮಾಡಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಮುಂದಿನ ಆದೇಶದವರೆಗೆ ವಿ.ವಿ. ಚಿಕ್ಕಗೋಪುರದ 4ನೇ ಮಹಡಿಯಲ್ಲಿ ಸುಮಾರು 3000 ಚದರಡಿಗಳಷ್ಟು ಸ್ಥಳಾವಕಾಶವನ್ನು ಕರ್ನಾಟಕ ಸರ್ಕಾರದ ಸಚಿವಾಲಯದ ತರಬೇತಿ ಸಂಸ್ಥೆಗೆ ಮರು ಹಂಚಿಕೆ ಮಾಡಿ ಆದೇಶಿಸಿದೆ.

ಮುಂದುವರಿದು, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 42 ಡಿಬಿಎಂ 2021 ದಿನಾಂಕ 10.02.2021ರಲ್ಲಿ ವಿ.ವಿ. ಚಿಕ್ಕಗೋಪುರದ 4ನೇ ಮಹಡಿಯಲ್ಲಿ ಸುಮಾರು 3000 ಚದರಡಿಗಳಷ್ಟು ಸ್ಥಳಾವಕಾಶವನ್ನು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಕಚೇರಿಗೆ ಹಂಚಿಕೆ ಮಾಡಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಮುಂದಿನ ಆದೇಶದವರೆಗೆ ವಿ.ವಿ. ಚಿಕ್ಕಗೋಪುರದ 5ನೇ ಮಹಡಿಯಲ್ಲಿನ ಪೂರ್ಣ ಸ್ಥಳಾವಕಾಶವನ್ನು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಕಚೇರಿಗೆ ಮರು ಹಂಚಿಕೆ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,
20/5/21
(ಕೆ. ರವೀಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸು ಇಲಾಖೆ (ಕಾರ್ಯಕಾರಿ)

ಗೆ,-

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿದ್ಯುನ್ಮಾನ, ಮಾಹಿತಿ, ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2) ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ಬಹುಮಹಡಿಗಳ ಕಟ್ಟಡ, ಬೆಂಗಳೂರು
3) ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು
4) ಅಧ್ಯಕ್ಷರು, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ, ಬೆಂಗಳೂರು
5) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ನಂ.16/ಡಿ, 3ನೇ ಮಹಡಿ, ಡಿ ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು 52
6) ನಿರ್ದೇಶಕರು, ಕರ್ನಾಟಕ ಸರ್ಕಾರ ಸಚಿವಾಲಯ ತರಬೇತಿ ಸಂಸ್ಥೆ, 8ನೇ ಮಹಡಿ, ವಿಶ್ವೇಶ್ವರಯ್ಯ ವಿ.ವಿ. ಗೋಪುರ 8ನೇ ಮಹಡಿ, ಡಾ:ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು 560 001
7) ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ,
8) ಸರ್ಕಾರದ ಜಂಟಿ ಕಾರ್ಯದರ್ಶಿ,ಸಿಆಸು ಇಲಾಖೆ, ವಿಧಾನ ಸೌಧ.
9) ಕಾರ್ಯಪಾಲಕ ಅಭಿಯಂತರರು, ನಂ.1, ಕಟ್ಟಡಗಳ ವಿಭಾಗ, ಲೋಕೋಪಯೋಗಿ ಇಲಾಖೆ, ಎಸ್‌ಜೆ.ಪಿ. ಆವರಣ, ಬೆಂಗಳರು
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1, ಕಟ್ಟಡಗಳ ಉಪ ವಿಭಾಗ, ವಿ.ವಿ. ಗೋಪುರ, ಬೆಂಗಳೂರು 560 001,
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.5, ವಿದ್ಯುತ್ ಉಪ ವಿಭಾಗ, ಲೋಕೋಪಯೋಗಿ ಇಲಾಖೆ, ವಿಧಾನ ಸೌಧ
12) ಶಾಖಾಧಿಕಾರಿ, ಸಿಆಸು ಇಲಾಖೆ (ಕಾರ್ಯಕಾರಿ-ಬಿ) / ಭದ್ರತಾಧಿಕಾರಿ / ಮೇಲ್ವಿಚಾರಕರು, ಸಿಆಸು ಇಲಾಖೆ (ಕಾರ್ಯಕಾರಿ-ಡಿ) ವಿಧಾನ ಸೌಧ / ಬಹುಮಹಡಿಗಳ ಕಟ್ಟಡ
13) ರಕ್ಷಾ ಕಡತ / ಕಚೇರಿ ಪ್ರತಿ